# ಸಮರ್ಪಣೆ

ಕುವೆಂಪು ಅವರು 'ತನ್ನನ್ನು ಇಲ್ಲವಾಗಿಸಿಕೊಳ್ಳುವುದೇ ಜೀವನದ ಪರಮಗಂತವ್ಯ' ಎಂದು ಒಂದೆಡೆ ಹೇಳಿಕೊಂಡಿದ್ದಾರೆ. ಈ ಮಾತಿನ ರಹಸ್ಯ ತಿಳಿಯುವುದು ಹೇಗೆ? ತನ್ನನ್ನು ತಾನು ಇಲ್ಲವಾಗಿಸಿಕೊಳ್ಳುವುದೆಂದರೆ ಏನು? ಪ್ರತಿಯೊಬ್ಬನಿಗೂ ಏನೇನೊ ಬಾಧೆಗಳು ಅಂಟಿಕೊಂಡಿರುತ್ತವೆ. ಕೆಲವರಿಗೆ ಸಂಸಾರದ ಬಾಧೆ ಮತ್ತೂ ಕೆಲವರಿಗೆ ಅಧಿಕಾರದ ಬಾಧೆ. ಇಂಥ ಬಾಧೆಗಳಿಗೆ ಇತಿಮಿತಿ ಎಂದೂ ಇರುವುದಿಲ್ಲ. ಇದು ನನ್ನದು ಎಂದು ಕೊಂಡಾಗ ಅದು ಬಾಧೆ. 'ಇದು ನನ್ನದಲ್ಲ ಎಲ್ಲವೂ ನಿನ್ನದೇ' ಎಂದುಕೊಂಡಾಗ ಅದು ಬಾಧೆಯಿಂದ ನಿವೃತ್ತಿ. ಎಲ್ಲಿ ನಿವೃತ್ತಿ, ಎಲ್ಲಿ ಪ್ರವೃತ್ತಿ? ಲೋಕಸತ್ತೆಯಲ್ಲೇ ಇರುವವನಿಗೆ ನಿವೃತ್ತಿ ಎಂಬುದಿಲ್ಲ. ಅಂಥವನು ವೃತ್ತಿಯಿಂದ ನಿವೃತ್ತಿಯಾದರೂ ಅವನ ಮನಸ್ಸಿಗೆ ಅದು ಅಂಟಿಕೊಂಡೇ ಇರುತ್ತದೆ. ನಿವೃತ್ತಿ ಎಂಬುದು ಕೇವಲ ಆಚಾರವಾಗಿರುತ್ತದೆಯೇ ಹೊರತು ಅದರಿಂದ ಬಿಡುಗಡೆ ಇರುವುದಿಲ್ಲ. ನಾವು ಆಸೆಗಳಿಗೆ ಅಂಟಿಕೊಂಡಿದ್ದಾಗ 'ಸಮರ್ಪಣೆ'ಗೆ ಅವಕಾಶ ಎಲ್ಲಿರುತ್ತದೆ ಹೇಳಿ? ತನ್ನನ್ನು ಇಲ್ಲವಾಗಿಸಿಕೊಳ್ಳುವ ಪ್ರಕ್ರಿಯೆಯೇ ಸಮರ್ಪಣೆ.

ಸಮರ್ಪಣೆ – ಎಂಬುದು ಜೀವನಚಕ್ರದಲ್ಲಿ ಆಗಾಗ್ಗೆ ತಲೆದೋರುವ ಅಪೂರ್ವ ಕ್ರಿಯಾಸಂಪತ್ತು. ಭೌತಿಕವಾಗಿ ಹೇಳುವುದಾದರೆ: ಹೆಣ್ಣು–ಗಂಡಿಗೆ ತನ್ನನ್ನು ಅರ್ಪಿಸಿಕೊಳ್ಳುವುದು ಸಮರ್ಪಣೆಯ ಒಂದು ಕ್ರಮವೇ. ರಾಧೆಯು ಶ್ರೀಕೃಷ್ಣನಿಗೆ ಅರ್ಪಿಸಿಕೊಳ್ಳುವುದು ಇಂಥದೊಂದು ಕ್ರಿಯಾಸಂಪತ್ತಿನಲ್ಲಿಯೇ. ಇಲ್ಲಿ ಭೌತಿಕ ಸ್ವರೂಪವೂ ಉಂಟು; ಅಭೌತಿಕ ಸ್ವರೂಪವೂ ಉಂಟು. ಈ ಸಂಗತಿಯನ್ನು ಗುರು–ಶಿಷ್ಯ ಸಂದರ್ಭದಲ್ಲಿ ನೋಡೋಣ. ಶಿಷ್ಯನು ಗುರುವಿಗೆ ತನ್ನನ್ನು 'ಅರ್ಪಿಸಿ'ಕೊಳ್ಳುತ್ತಾನಷ್ಟೆ. ಆಗ ಗುರುವು ಅವನ ಮಾನಸಿಕ–ವಾಚಿಕ–ದೈಹಿಕ ಕಿಲ್ಬಿಷಗಳನ್ನು ಕಳೆದು ಶುದ್ಧಸತ್ತ್ವದಲ್ಲಿ ಶಿಷ್ಯನನ್ನು ನಿಲ್ಲಿಸುತ್ತಾನೆ. ಇದು ಸಂಗೀತ–ಕಲೆ–ಶಾಸ್ತ್ರ ಪ್ರಪಂಚಗಳಲ್ಲಿ ಸರ್ವಸಾಮಾನ್ಯವಾಗಿ ಹಿಂದಿನಿಂದ ರೂಢಿಯಲ್ಲಿತ್ತು. ಶಿಷ್ಯನ ಅಹಂಕಾರ ಮರ್ದನ ಮಾಡಿ ಅವನ ಶರೀರದಲ್ಲಿ ಕಲೆಯ ಸಂಪತ್ತನ್ನು ಗುರು ಇರಿಸುತ್ತಿದ್ದ. ಇಂಥ ಸಂದಭದಲ್ಲಿ ಶಿಷ್ಯನ ಸರ್ವಸಮರ್ಪಣೆ, ಗುರುವಿನ ಶಿಷ್ಯಾನುಗ್ರಹ ಇವೆರಡೂ ಒಂದಕ್ಕೊಂದು ಬೆರೆತುಕೊಳ್ಳುತ್ತಿದ್ದವು. ಸಂಗೀತವೋ ಕಲಾಸಂಪತ್ತೋ ಅವರಿಬ್ಬರ ಬದುಕಿನ ಸೂಕ್ಷ್ಮ ಸಂತುಲನವಾಗಿರುತ್ತಿತ್ತು. ಅಲ್ಲಿ ಸಪ್ತಸ್ವರಗಳ ಗಮನಾಗಮನ ಮಾತ್ರ ಇರುತ್ತಿರಲಿಲ್ಲ. ಆರೋಹಣ–ಅವರೋಹಣಗಳ ಭೌತಿಕ ಗತಿಪ್ರಪಂಚ ಮಾತ್ರ ಇರುತ್ತಿರಲಿಲ್ಲ. ಅಲ್ಲಿ ಜೀವನಸಂಗೀತವೇ ಪ್ರಧಾನವಾಗಿರುತ್ತಿತ್ತು. ಒಂದೊಂದು ಸ್ವರವೂ ದಿವ್ಯವೂ ಐಂದ್ರಿಯಕವೂ ಆಗಿರುತ್ತಿತ್ತು!

ನಾವು ಯಾವ ಕೆಲಸ ಮಾಡಿದರೂ 'ಸಮರ್ಪಣೆ' ಸಮ್ಯಕ್ ಸಂಕಲ್ಪದಿಂದ ಕೂಡಿರುವುದು ಅವಶ್ಯ. ಮಿಲಿಂದನು ತನ್ನ ಗುರುವಾದ ನಾಗಸೇನನಿಗೆ ಹೀಗೊಂದು ಪ್ರಶ್ನೆ ಮಾಡುತ್ತಾನೆ. 'ಭನ್ತೆ, ಬುದ್ಧ ಭಗವಂತನು ತನ್ನ ಹಲವು ಶಿಷ್ಯರಿಗೆ ಹೇಳಿದ್ದನಂತೆ. ಭಿಕ್ಕುಗಳು ಅವರಿವರ ಮನೆಯಲ್ಲಿ ಧ್ಯಾನ ಮಾಡಬಾರದು. ವಿಹಾರದ ಸಭಾಭವನದಲ್ಲಿಯೂ ಧ್ಯಾನಕ್ಕೆ ಕುಳಿತುಕೊಳ್ಳಬಾರದು. ನದೀದಂಡೆ, ನಿರ್ಜನಪ್ರದೇಶ, ಗಲಾಟೆ, ಸದ್ದಿಲ್ಲದ ಸ್ಥಳದಲ್ಲಿ ತಾನೊಬ್ಬನೇ ಏಕಾಂಗಿಯಾಗಿ ಕುಳಿತುಕೊಂಡು ಧ್ಯಾನಮಾಡಬೇಕು ಎಂದು ಹೇಳಿದ್ದನಂತೆ, ಹೌದೆ? ಹಾಗೆಯೇ ಮಾಡಬೇಕೆ?' ಈ ಪ್ರಶ್ನೆಗೆ ನಾಗಸೇನನು 'ಹೌದು ಹಾಗೆಯೇ ಮಾಡಬೇಕು. ಭಗವಂತನು ಹೇಳುವುದರಲ್ಲಿ ಅರ್ಥ ಉಂಟು. ಸಾಧಕ ಇನ್ನೂ ನಡಿಗೆ ಕಲಿಯುವ ಮಗು. ಆತ ತಪ್ಪು ಹೆಜ್ಜೆ ಇಡುವ ಬಾಲಕ. ಇಂಥವನು ಏಕಾಂತವನ್ನು ಅರಸಿಕೊಂಡು ಸಾಧನೆ ಮಾಡುವುದು ಅಗತ್ಯ.' ಇದು ಬುದ್ಧದೇವನು ಕೊಟ್ಟ ಉತ್ತರ! ಈಗ ಎಲ್ಲೆಲ್ಲೂ 'ಧ್ಯಾನಕೇಂದ್ರ'ಗಳಿವೆ. ಅಲ್ಲಿ ಮೂರುದಿನಗಳಿಗೊ ಐದುದಿನಗಳಿಗೊ ಹತ್ತು ದಿನಗಳಿಗೊ 'ಮೆಡಿಟೇಷನ್ ಕ್ಯಾಂಪ್'ಗಳು' ಇರುತ್ತವೆಂದು ಪ್ರಚಾರ ಮಾಡುತ್ತಾರೆ. ಜನ ಇಂಥ 'ಧ್ಯಾನಕೇಂದ್ರ'ಕ್ಕೆ ನುಗ್ಗಿ ಸಾವಿರಾರು ರೂಪಾಯಿಗಳ ಹಣವನ್ನು ಕಟ್ಟುತ್ತಾರೆ. ಇಂಥ ಸ್ಥಳಗಳಲ್ಲಿ ಶಿಷ್ಯನ ಅರ್ಪಣೆ–ಗುರುವಿನ ಸ್ವೀಕಾರ ಹೇಗೆ ನಡೆಯಬಹುದು? ಆಧುನಿಕ ಧ್ಯಾನಕೇಂದ್ರಗಳು ವ್ಯಾಪಾರದ ಸ್ಥಳವಾದಾಗ ಅಲ್ಲಿ 'ಸಮರ್ಪಣೆ' ಎಂಬ ಮಾತಿಗೆ ಮೌಲ್ಯ ಬರಲು ಸಾಧ್ಯವೆ?

ಸಮರ್ಪಣೆ ಎಂಬ ಮಾತು ಮನೋವಾಕ್ಕಾಯಗಳಿಗೆ ಮೀರಿದ್ದು. ಅದೊಂದು ಶುಭ್ರತುಹಿನ ಕಿರೀಟ. ಅಲ್ಲಿ ಇಂದ್ರಿಯಗಳ ವ್ಯಾಪಾರವಿಲ್ಲ. ಕೊಳು–ಕೊಡುಗೆಗಳ ವ್ಯವಹಾರವಿಲ್ಲ. ಅದೊಂದು ಅತಿಮಧುರವಾದ ಅಶ್ರುತಗಾನ. ಈ ಗಾನಕ್ಕೆ ಸ್ವಾರ್ಥವಿಲ್ಲ. ಅಲ್ಲಿ ಎಲ್ಲವೂ ಪರಾರ್ಥ. ಇಂಥ ಲೋಕವ್ಯಾಪಾರವು 'ಸಮರ್ಪಣೆ'ಯ ಭಾವದಿಂದ ಸಹಸ್ರ ಮೈಲಿ ದೂರದಲ್ಲಿರುತ್ತದೆ. ಲೋಕ ವ್ಯಾಪಾರ ರಂಜನೀಯವಾದದ್ದು. ಮಾತಿನ ಎಳೆಎಳೆಯಾದ ನೇಯ್ಗೆಯಲ್ಲಿ ಲೋಕವನ್ನು ಬಂಧಿಸುವ ವಿಷಮತೆಯನ್ನು ನಾವು ಇಂಥ ಧ್ಯಾನಕೇಂದ್ರಗಳಲ್ಲಿ ಕಾಣುತ್ತೇವೆ. ಆದರೆ, ಬುದ್ಧನಿಗೆ ಆನಂದ ತನ್ನನ್ನು ತಾನೇ ಅರ್ಪಿಸಿಕೊಂಡದ್ದಾಗಲಿ; ನಚಿಕೇತನು ಯಮನಿಗೆ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತ ತನ್ನನ್ನು ಸಮರ್ಪಣೆ ಮಾಡಿಕೊಂಡು ಉತ್ತರಗಳನ್ನು ಪಡೆದಿದ್ದಾಗಲಿ ಬಗೆದು ನೋಡಿದರೆ 'ಸತ್ಯ'ದ ನೆಲೆ ತಿಳಿಯಲು ನಮಗೆ ಸಾಧ್ಯವಾಗುತ್ತದೆ.

ವ್ಯಕ್ತಿಯು ವ್ಯಕ್ತಿಮತ್ವಕ್ಕೆ ತಿರುಗುವುದೆಂದರೆ, ಸಂಪೂರ್ಣ ಸಮರ್ಪಣೆಯೇ ಅವನ ಗುರಿಯಾಗಿರಬೇಕಾಗುತ್ತದೆ. ಅಕರ್ಮವು ಕರ್ಮದ ಕಡೆ ತಿರುಗುವುದಾಗಲಿ, ಹೊರಮುಖವು ಒಳಮುಖದತ್ತ ಸರಿಯುವುದಾಗಲಿ, 'ಸಮರ್ಪಣೆ'ಗೆ ಸಮ್ಯಕ್‌ಸಂಕಲ್ಪ ಸಿದ್ಧಿಯಾದಾಗ ಮಾತ್ರ ಇದು ಸಾಧ್ಯ. ಒಬ್ಬ ದೊಡ್ಡ ಕಲಾವಿದ, ಒಬ್ಬ ದೊಡ್ಡ ಕವಿ; ಒಬ್ಬ ದೊಡ್ಡ ವಿಜ್ಞಾನಿ; ಒಬ್ಬ ದೊಡ್ಡ ರಾಜಕಾರಣಿ – ಇಂಥವರಲ್ಲಿ ಸಮರ್ಪಣೆಯ ಮಹಾಸಿದ್ಧಿಯನ್ನು ನಾವು ಕಾಣುತ್ತೇವೆ. ನಮ್ಮ ಕರ್ನಾಟಕದಲ್ಲೇ ಸಮಾಜಕ್ಕೆ ತಮ್ಮನ್ನು ತಾವೇ ಸಮರ್ಪಣೆ ಮಾಡಿಕೊಂಡವರು ಕಡಿಮೆ ಇದ್ದಾರೆಯೆ? ಉತ್ತರಕರ್ನಾಟಕದ ಅಥಣಿ ಶಿವಯೋಗಿಗಳೂ ಸದ್ಗುರು ಸಿದ್ಧಾರೂಢರೂ ಪರಮಪೂಜ್ಯ ತ್ರಿವಿಧ ದಾಸೋಹಿಗಳಾದ ಶಿವಕುಮಾರಸ್ವಾಮಿಗಳೂ ಸಮಾಜ ಸಮರ್ಪಣೆಗೆ ತಮ್ಮನ್ನು ತಾವೇ ತೆತ್ತಿಕೊಂಡ ಮಹಾನುಭಾವಿಗಳಲ್ಲಿ ಕೆಲವರು. ಇಂಥವರಲ್ಲಿ ಸ್ವಾರ್ಥವಿಲ್ಲ; ಎಲ್ಲವೂ ಲೋಕಾರ್ಥವೇ. 'ಸಮರ್ಪಣೆ' ಎಂಬ ಮಾತು, ಮೌನದ ದಿಗಂತವನ್ನು ಏರಿ ಇಂಥವರಲ್ಲಿ ನಿಲ್ಲುತ್ತದೆ. ಆದರೆ, ಇಂದು 'ಸಮರ್ಪಣೆ'ಯು ಸಮಾಜದ ಲೋಕವ್ಯವಹಾರದ ತೋರಿಕೆ ಭಾಗವಾಗಿದೆಯೇ ಹೊರತು ಪರಮಸಿದ್ಧಿಯ ಗಂತವ್ಯವಾಗಿಲ್ಲ! ಹೀಗಾಗಿ, ನಮ್ಮ ಸಂಸ್ಕೃತಿಯು ಮೌಲ್ಯಗಳ ನೆಲೆಗಳಿಂದ ಕುಸಿಯುತ್ತಿದೆ. ಇಲ್ಲಿ 'ಸಮರ್ಪಣೆ' ಎಂಬ ಮಾತು ಕೃತಕತೆಯ ಭಾಗವಾಗುತ್ತಿದೆ.

**■ ಪುರಂಜೀವಿ**

## ಮಾತೇ ಮುತ್ತು

- ಗುರಿ ತಪ್ಪಿದರೂ ಹಾದಿ ತಪ್ಪಬಾರದು.
  —ಎಸ್.ವಿ. ಪರಮೇಶ್ವರಭಟ್ಟ
- ಓದಿನಿಂದ ವ್ಯಕ್ತಿತ್ವ ಪೂರ್ಣಗೊಳ್ಳುತ್ತದೆ.
  —ಫ್ರಾನ್ಸಿಸ್ ಬೇಕನ್
- ಗಾದೆಗಳು ವೇದದಷ್ಟೇ ಬಹುಶಃ ಅವಕ್ಕೂ ಹಳೆಯವೆಂಬುದೇನೋ ನಿಜವೆ.
  —ಜಿ.ಎಸ್. ಶಿವರುದ್ರಪ್ಪ
- ನಾನು ಅಚಲವಾದ ಆಶಾವಾದಿ. ನನ್ನ ಆಶಾವಾದವನ್ನು ಯಾರೂ ಅದುಮಿಡಲಾರರು. ಆದರೆ ಈ ಆಶಾವಾದವು ನಿರ್ದಿಷ್ಟವಾದ ಸಂಗತಿಗಳನ್ನು ಆಧರಿಸಿದೆ.
  —ಮಹಾತ್ಮ ಗಾಂಧಿ
- ಆತ್ಮವಿಶ್ವಾಸವೇ ನಿಜವಾದ ಸುಖ.
  —ಬರ್ವೆ
- ಇತಿಹಾಸವೆಂದರೆ ಲೋಕದ ಆಗುಹೋಗುಗಳನ್ನು ತತ್ಕಾಲೀನ ಸಾಮಾಜಿಕ ಕಾರ್ಯಕಾರಣ ಸಂಬಂಧದ ಹಿನ್ನೆಲೆಯಲ್ಲಿ ವಿವರಿಸುವುದೇ ಆಗಿದೆ.
  —ಶಂಬಾ ಜೋಶಿ
- ಉದ್ದೇಶವೇ ಇಲ್ಲದ ಜೀವನವು ಹುಚ್ಚು ಅಲೆದಾಟ.
  —ಸಿಂಪಿ ಲಿಂಗಣ್ಣ